SRI R. V. DESHAPANDE.—If the Hon'ble Speaker directs me I will do it. I will bow down. ಪ್ರಶ್ನೆ ಏನೆಂದರೆ ನೇರವಾಗಿ ಇವನೇ ಅಧಿಕಾರಿ ಮಾಡಿದ್ದಾನೆಂದು ಇಲ್ಲ. ಆ ತಾಲ್ಲೂಕಿನಲ್ಲಿ ಸ ಕಪ್ಪು ಮಂಡಲಗಳು ಇವೆ. ಆ ಮಂಡಲಗಳಿಗೆ ಗೋಧಿ, ಅಕ್ಕಿ ವಿತರಣೆ ಆಗಿದೆ. ಇಲ್ಲಿ ಮಿಸ್ ಅಪ್ರೋಪ್ರಿಯೇಷನ್ ಆಗಿದೆ ಎಂದು ಹೇಳಿದ್ದಾರೆಯೇ ಹೊರತು ನೇರವಾಗಿ ಇಂತಹ ಅಧಿಕಾರಿಯೇ, ಇಂತಹ ಮಂಡಲದಲ್ಲಿಯೇ ಇದು ಆಗಿದೆ ಎಂದು ಹೇಳಿಲ್ಲ. ಇದನ್ನು ಹೇಳದೇ on the vague allegations, If I refer it to C. O. D., it will not be proper.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ಪೆಸಿಫಿಕ್ಕಾಗಿ ೨೦ ಮಂಡಲಗಳ ಬಗ್ಗೆ ವಿವರಣೆಯನ್ನು ನೀವೇ ಕೊಟ್ಟಿದ್ದೀರಿ. That is why, to know the truth, we are asking for C. O. D. Enquiry. ಎಂದರೆ ಎಲ್ಲಾ ಕೆಲಸ ಬಿಟ್ಟು ನಾವೇ ಸಿಓಡಿ ಕೆಲಸ ಮಾಡುವುದಕ್ಕಾಗುತ್ತದೆಯೇ ? It is our duty to bring to the notice of the Government about the irregularities committed by the officers. ಅಧ್ಯಕ್ಷರೇ, ಇದನ್ನು ಸಿಓಡಿಗೆ ರೆಫರ್ ಮಾಡಲಿ. ಇದರಲ್ಲಿ ಗೌರವದ ಪ್ರಶ್ನೆ ಏನಿದೆ ? ನೀವು ಸಿಓಡಿ ರೆಫರ್ ಮಾಡಿದರೆ ಮುಂದಿನವರಿಗೆ ಭಯ ಹುಟ್ಟುತ್ತದೆ. ಆದುದರಿಂದ We are asking for C. O. D. enquiry to the extent of Hukkeri taluk only. please entirust the enquiry to the C. O. D., we are not asking for the entire division. Only with regard to Hukkeri, where mis-utilisation and misappropriation of food grains have taken place, we are asking for C. O. D. enquiry. ಒಂದು ತಾಲ್ಲೂಕಿಗೆ ಏಕೆ ಆಗುವುದಿಲ್ಲ ? ಆದರಲ್ಲಿ ಕೇವಲ ೨೦ ಹಳ್ಳಿಗಳು ಇವೆ.

ಅಧ್ಯಕ್ಷರು.—ಅವರ ಸಲಹೆಯನ್ನು ಎಕ್ಸಾಮಿನ್ ಮಾಡಿ.

ಶ್ರೀ ಆರ್. ವಿ. ದೇಶಪಾಂಡೆ.—ಅವರ ಸಲಹೆಯನ್ನು ಎಕ್ಸಾಮಿನ್ ಮಾಡುತ್ತೇನೆ.

ಆ. ಮುಂದೂಡಲಾದ ಪ್ರಶ್ನೆಗಳು.

ಅಧ್ಯಕ್ಷರು.—ಮಾನ್ಯ ಖಾರ್ಗೆಯವರೇ, ನಿನ್ನೆ ಪಟ್ಟಿಯಿಂದ ಮುಂದೂಡಲಾದ ಮಾನ್ಯ ಬಿ. ಲಕ್ಕಪ್ಪನವರ ಪ್ರಶ್ನೆ ೧೬೩ನ್ನು ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಯವರಿಗೆ ಕೇಳಿ.

ಆಕ್ಟ್ರಾಯ್ ಹಾಗೂ ವಾಹನ ತೆರಿಗೆಗಳ ಪರಿಹಾರ ಕೊಡುವ ವಿಚಾರ.

೧೬೩. ಶ್ರೀ ಬಿ. ಲಕ್ಕಪ್ಪ.— ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೪೬-೪೭ ಮತ್ತು ೧೯೪೭-೪೮ನೇ ಸಾಲಿನಲ್ಲಿ ರಾಜ್ಯದಲ್ಲಿ ನಗರಸಭೆ ಹಾಗೂ ಪುರಸಭೆಗಳಿಗೆ ಸರ್ಕಾರದವರು ಕೊಡಬೇಕಾದ ಆಕ್ಟ್ರಾಯ್ ಹಾಗೂ ವಾಹನ ತೆರಿಗೆಗಳ ಪರಿಹಾರ ಧನವನ್ನು ಸಂದಾಯ ಮಾಡದೆ ಇರುವುದು ನಿಜವೆ ?

ಆ) ಹಾಗಿದ್ದಲ್ಲಿ ಹಣ ಸಂದಾಯವಾಗಿಲ್ಲದಿರುವ ನಗರಸಭೆ ಹಾಗೂ ಪುರಸಭೆಗಳಷ್ಟು ? (ತಾಲ್ಲೂಕುವಾರು ಪೂರ್ಣ ವಿವರ) ಮತ್ತು ಈ ವಿಳಂಬಕ್ಕೆ ಕಾರಣಗಳೇನು ?

ಶ್ರೀ ಎಂ. ಚಂದ್ರಶೇಖರಿಂ (ನಗರಾಭಿವೃದ್ಧಿ ಸಚಿವರು).—

ಅ) ೧೯೪೬-೪೭ ರಲ್ಲಿ ನಾಲ್ಕು ಕಂತುಗಳಲ್ಲಿ ಮತ್ತು ೧೯೪೭-೪೮ರಲ್ಲಿ ೨ ಕಂತುಗಳಲ್ಲಿ ಆಕ್ಟ್ರಾಯ್ ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಅದೇ ರೀತಿ ವಾಹನ ತೆರಿಗೆ ಪರಿಹಾರ ಧನವನ್ನು ಸಹ ಪ್ರತಿ ವರ್ಷ. ದಿನಾಂಕ ೨೪-೩-೪೦ರ ಸರ್ಕಾರಿ ಆದೇಶದಲ್ಲಿ ಗೊತ್ತುಪಡಿಸಿದ ರೀತಿಯಲ್ಲೆ ಬಿಡುಗಡೆ ಮಾಡಲಾಗಿದೆ.

ಆ) ಉದ್ಭವಿಸುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಶ್ರೀ ಬಿ. ಲಕ್ಕಪ್ಪ ಅವರ ಪರವಾಗಿ).—

ಅ) ೧೯೮೬–೮೭ ಮತ್ತು ೧೯೮೭–೮೮ನೇ ಸಾಲಿನಲ್ಲಿ ರಾಜ್ಯದಲ್ಲಿ ನಗರಸಭೆ ಹಾಗೂ ಪುರಸಭೆಗಳಿಗೆ ಸರ್ಕಾರದವರು ಕೊಡಬೇಕಾದ ಆಕ್ಟ್ರಾಯ್ ಹಾಗೂ ವಾಹನ ತೆರಿಗೆಗಳ ಪರಿಹಾರ ಧನವನ್ನು ಸಂದಾಯ ಮಾಡದೆ ಇರುವುದು ನಿಜವೆ ?

ಆ) ಹಾಗಿದ್ದಲ್ಲಿ ಹಣ ಸಂದಾಯವಾಗಿಲ್ಲದಿರುವ ನಗರಸಭೆ ಹಾಗೂ ಪುರಸಭೆಗಳೆಷ್ಟು ? (ತಾಲ್ಲೂಕುವಾರು ಮಾಹಿತಿ ತಿಳಿಸುವುದು ಹಾಗೂ ಈ ವಿಳಂಬಕ್ಕೆ ಕಾರಣಗಳೇನು ?)

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—೧೯೮೬–೮೭ರಲ್ಲಿ ನಾಲ್ಕು ಕಂತುಗಳಲ್ಲಿ ಮತ್ತು ೧೯೮೭–೮೮ರಲ್ಲಿ ೨ ಕಂತುಗಳಲ್ಲಿ ಆಕ್ಟ್ರಾಯ್ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಈಗ ಇನ್ನೊಂದು ಕಂತು ಕೂಡ ಬಿಡುಗಡೆ ಆಯಿತು. ಮೂರನೇ ಕಂತಿನಲ್ಲಿ ಆಕ್ಟ್ರಾಯ್ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಇದು ಬಾಕಿ ಇತ್ತು. ಅದನ್ನು ಅವರು ಕೇಳಿದ್ದರು. ಅದೇ ರೀತಿ ವಾಹನ ತೆರಿಗೆ ಪರಿಹಾರಧನವನ್ನು ಸಹ ಪ್ರತಿವರ್ಷ ದಿನಾಂಕ ೨೪–೩–೮೦ರ ಸರ್ಕಾರಿ ಆದೇಶದಲ್ಲಿ ಗೊತ್ತುಪಡಿಸಿದ ರೀತಿಯಲ್ಲಿ ಬಿಡುಗಡೆ ಮಾಡಲಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಕನಿಷ್ಟ ಪಕ್ಷ ಇಷ್ಟಾದರೂ ಹೇಳಿ. ಸರ್ಕಾರದವರು ಎಷ್ಟು ಹಣವನ್ನು ಪುರಸಭೆಗಳಿಗೆ ಬಿಡುಗಡೆ ಮಾಡಿದ್ದಾರೆ? ವೆಹಿಕಲ್ ಟ್ಯಾಕ್ಸ್ ಮತ್ತು ಆಕ್ಟ್ರಾಯ್‌ನಿಂದ ಟೋಟಲ್ ಅಮೌಂಟ್ ಎಷ್ಟು ?

ಶ್ರೀ ಎಂ. ಚಂದ್ರಶೇಖರ್.—ನಾನು ಚಿಕ್ಕನಾಯಕನ ಹಳ್ಳಿಯದನ್ನು ಮಾತ್ರ ಪ್ರಸ್ತಾಪ ಮಾಡುತ್ತಿದ್ದೇನೆ. ೧೪.೦೫ ಲಕ್ಷ ಬಿಡುಗಡೆ ಆಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೊದಲನೇ ಪ್ರಶ್ನೆ ಜನರಲ್ ಆಗಿದೆ. ''೧೯೮೬–೮೭ ಮತ್ತು ೧೯೮೭–೮೮ನೇ ಸಾಲಿನಲ್ಲಿ ರಾಜ್ಯದಲ್ಲಿ ನಗರಸಭೆ ಹಾಗೂ ಪುರಸಭೆಗಳಿಗೆ ಸರ್ಕಾರದವರು ಕೊಡಬೇಕಾದ ಆಕ್ಟ್ರಾಯ್ ಹಾಗೂ ವಾಹನ ತೆರಿಗೆಗಳ ಪರಿಹಾರ ಧನ ಎಷ್ಟು'' ಎಂದು ಕೇಳಿದ್ದಾರೆ ಇದು ಜನರಲಿಗಿದೆ.

ಶ್ರೀ ಎಂ. ಚಂದ್ರಶೇಖರ್. - ಟೋಟಲ್ ಆಕ್ಟ್ರಾಯ್ ಅನುದಾನ,.....ಈ ಮಾಹಿತಿ ಇದೆ ತರಿಸಿಕೊಡುತ್ತೇನೆ. ಕರೆಕ್ಟ್ ಆಗಿ ಹೇಳಬೇಕೆಂದರೆ ಅಂಕಿ ಅಂಶ ಬೇಕಾಗುತ್ತದೆ. ತರಿಸಿಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ —ದುಡ್ಡು ಎಷ್ಟು ಬಿಡುಗಡೆ ಮಾಡಿದ್ದೀರಿ ಎಂದು ಗೊತ್ತಿಲ್ಲದ ಮೇಲೆ ಇನ್ನು ನಾನು ಏನು ಕೇಳಲಿ ? ಈಗ ಪುರಸಭೆಗಳಿಗೆ ಬಾಕಿ ಕೊಡಬೇಕಾದ ವಾಹನ ತೆರಿಗೆ ಬಾಕಿ ಮತ್ತು ಆಕ್ಟ್ರಾಯ್ ತೆರಿಗೆ ಬಾಕಿ ಎಷ್ಟು ಕೊಟ್ಟಿದ್ದೀರಿ ಎಂದು ಹೇಳಿಲ್ಲ ಎಂದರೆ ನಾನು ಮತ್ತೆ ಕೇಳುವುದು ಏತಕ್ಕೆ ? ಬೇಕಾದರೆ ನಾಳೆ ಉತ್ತರ ಕೊಡಲಿ.

ಶ್ರೀ ಎಂ. ಚಂದ್ರಶೇಖರ್.—ಕೊಡಬೇಕಾಗಿರುವ ಉತ್ತರವನ್ನು ಎಲ್ಲಾ ಕೊಟ್ಟು ಆಗಿದೆ. ಚಿಕ್ಕನಾಯಕನಹಳ್ಳಿಗೆ ಸಂಬಂಧಪಟ್ಟಹಾಗೆ ಮಾತ್ರ ಇಲ್ಲಿ ಮಾಹಿತಿ ಇರುವುದು.

ಅಧ್ಯಕ್ಷರು.—ಹಾಗಾದರೆ ಮುಂದಿನ ವಾರ ತೆಗೆದುಕೊಳ್ಳೋಣ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಈ ಸರ್ಕಾರದ ಮೇಲೆ ಭರವಸೆ ಇಲ್ಲ. ಮುಂದಿನವಾರ ಎಂದು ಹೇಳಬೇಡಿ. ಬೇಕಾದರೆ ಸೋಮವಾರ ಎಂದು ಹೇಳಿ.

ಅಧ್ಯಕ್ಷರು.—ಸರ್ಕಾರದ ಬಗ್ಗೆ ವಿಶ್ವಾಸ ಇಲ್ಲ, ಅಸೆಂಬ್ಲಿ ಬಗ್ಗೆ ವಿಶ್ವಾಸ ಇಲ್ಲ ಎಂದರೆ ಹೇಗೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಸೆಂಬ್ಲಿ ಬಗ್ಗೆ ನಿಮ್ಮ ಒಗ್ಗೆ ನಾನು ಹೇಳಲಿಲ್ಲ. ನಾನು ಹೇಳಿದ್ದುದು ಸರ್ಕಾರದ ಬಗ್ಗೆ.

ಅಧ್ಯಕ್ಷರು.—ಸರ್ಕಾರ ಹೋದರೂ ನೀವು ಇಲ್ಲಿ ಇರುತ್ತೀರಿ.